ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅವರು ಪ್ರಾಯಕ್ಕೆ ಬಂದವರಾದುದರಿಂದ ಮತ್ತು ಸ್ವಯಿಚ್ಛೆಯಿಂದ ಮದುವೆಯಾದುದರಿಂದ ಇದು ಕಾನೂನಿನನುಸಾರವಾಗಿ ನಡೆದಿರುತ್ತದೆ. ಈಗ ಸುಜಾತಳ ತಂದೆಯು ಕಡೆಯವರಿಂದ ಜೀವಕ್ಕೆ ಬೆದರಿಕೆ ಕೂಡ ಇರುವುದರಿಂದ ಅವರು ತುಂಬಾ ಕಂಗಾಲಾಗಿ ಮುಂದೆ ಧೈರ್ಯವಾಗಿ ಜೀವಿಸುವುದೇ ಕಷ್ಟವಾಗಿದೆ ಎಂಬುದಾಗಿ ದೂರುತ್ತಿದ್ದಾರೆ. ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಹ ಸಮಯದಲ್ಲಿ ಜಯರಾಮ ಮತ್ತು ಅವನ ತಾಯಿ ಸಂಬಂಧಪಟ್ಟ ಕುಂದಾಪುರ ಪೋಲೀಸ್ ಸ್ಟೇಷನ್ನಿಗೆ ಮತ್ತು ಮೇಲಧಿಕಾರಿಗಳಿಗೆ ಫಿರ್ಯಾದು ಕೊಟ್ಟಿರುತ್ತಾರೆ, ಆದ್ದರಿಂದ ಸರ್ಕಾರ ಈ ಬಗ್ಗೆ ಗಮನ ಹರಿಸಿ ಸರಿಯಾದ ತನಿಖೆ ನಡೆಸಿ ಸಂಬಂಧಪಟ್ಟ ಜಯರಾಮಶೆಟ್ಟಿ ಮತ್ತು ಸುಜಾತಳಿಗೆ ರಕ್ಷಣೆ ಕೊಟ್ಟು ಅವರು ಧೈರ್ಯವಾಗಿ ಬದುಕುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಉತ್ತರವನ್ನು ನೀಡಲಿಚ್ಛಿಸುತ್ತೇನೆ.

ಕೆಂಜೂರು ಗ್ರಾಮದ ಶ್ರೀ ಜಯರಾಮಶೆಟ್ಟಿ ಹಾಗೂ ಸುಜಾತ ಇವರುಗಳು ಈ ಹಿಂದೆ ಪ್ರೀತಿಸುತ್ತಿದ್ದು, ಸುಜಾತರವರ ಮನೆಯವರ ಇಚ್ಛೆಯ ವಿರುದ್ಧವಾಗಿ ಈ ಮದುವೆ ಮಾಡಿಕೊಂಡಿರುವುದರಿಂದ ಅವರಿಗೆ ಅಪಾಯವಿರುವುದನ್ನು ಗಮನಿಸಿ ಸೂಕ್ತ ರಕ್ಷಣೆ ನೀಡುವಂತೆ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲಾ ಆರಕ್ಷಕರಿಗೆ ಸೂಚಿಸಲಾಗಿದೆ.

ಛೇರ್ಮನ್.—ಮಾನ್ಯ ಯಡಿಯೂರಪ್ಪನವರೆ, ತಮ್ಮ ನೋಟೀಸ್‌ಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ನಾಳೆ ತಮ್ಮ ನೋಟೀಸ್‌ಗೆ ಉತ್ತರ ಕೊಡಿಸೋಣ.

(೭) ಕಡೂರು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ

ಶ್ರೀ ಎಂ. ವೀರಭದ್ರಪ್ಪ (ಕಡೂರು).—ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶ ಎಂದು ಘೋಷಿಸಬೇಕೆಂದು ಕೋರುತ್ತೇನೆ. ಏಕೆಂದರೆ ಹಿಂದಿನ ವರ್ಷವೂ ನಮ್ಮ ಕ್ಷೇತ್ರ ಮತ್ತು ತಾಲ್ಲೂಕಿನಲ್ಲಿ ಮಳೆ ಬಾರದೆ ಹಿಂಗಾರು ಮುಂಗಾರು ಬೆಳೆ ಯವುದೂ ಆಗಿಲ್ಲ. ಮತ್ತೆ ಈ ವರ್ಷವೂ ಸ್ವಲ್ಪ ಮಳೆಯಾಗಿ ಮುಂಗಾರು ಬೆಳೆ ಬಿತ್ತಿದ ಮೇಲೆ ಯಾವ ಮಳೆಯೂ ಬರದೇ ಇದ್ದುದರಿಂದ, ಇದ್ದಂಥ ಅಲ್ಪಸ್ವಲ್ಪ ಫಸಲು ಒಣಗಿ ತೆಂಗಿನ ಮರಕ್ಕೆ ಕಪ್ಪು ತಲೆ ಹುಳು ಬಿದ್ದು ಬೆಳೆಯನ್ನು ನಾಶ ಮಾಡುತ್ತಿದೆ. ಯಾವರೀತಿಯ ಬೆಳೆಯೂ ಆಗದೆ ಜನಜೀವನಕ್ಕೆ ತುಂಬಾ ತೊಂದರೆಯಾಗಿದ್ದು ಸಾಮಾನ್ಯ ಜನರು ಕಂಗಾಲಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಜೀವನೋಪಾಯಕ್ಕೆ ಯಾವ ಕೆಲಸವೂ ಇಲ್ಲವಾಗಿರುತ್ತದೆ. ಈ ಬಗ್ಗೆ ಕಂದಾಯ ಸಚಿವರು ಕೂಡಲೇ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್ (ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿ ಪ್ರಸಕ್ತ ಮುಂಗಾರು ಸಾಲಿನಲ್ಲಿ ಕಡಿಮೆ ಮಳೆ ಆಗಿರುವುದು ಸರಕಾರದ ಗಮನದಲ್ಲಿ ಇದೆ. ಅವಶ್ಯ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಚಿಕ್ಕಮಗಳೂರು ಜಿಲ್ಲೆಗೆ ಈಗಾಗಲೇ ೫ ಲಕ್ಷ ರೂಪಾಯಿಗಳನ್ನು ಅಭಾವ ಪರಿಹಾರದಡಿ ಬಿಡುಗಡೆ ಮಾಡಿದೆ ಗ್ರಾಮೀಣ ಆಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಕೃಷಿ ಕಾರ್ಮಿಕರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸುವ ಕಾರ್ಯಕ್ರಮ ಈಗಾಗಲೇ ಜಾರಿಯಲ್ಲಿದೆ. ಅಗತ್ಯಬಿದ್ದಲ್ಲಿ ಅಭಾವ ಪರಿಹಾರದಡಿ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಸಹ ಕೈಗೊಳ್ಳಲಾಗುವುದು. ಮುಂಗಾರು ಬೆಳೆ ಸದ್ಯದ ಪರಿಸ್ಥಿತಿಯಲ್ಲಿ ಕುಂಠಿತವಾಗಿದ್ದು ಈ ಬೆಳೆ ಇಡಲು ಸಮಯ ಪೂರ್ಣವಾಗಿಲ್ಲ. ಉಳಿದ ಸಮಯದಲ್ಲಿ ಮಳೆ ಬಂದಲ್ಲಿ ಅಗತ್ಯವಿರುವ ಸೌಲಭ್ಯಗಳನ್ನು ರೈತರಿಗೆ ಒದಗಿಸಿ ಬೆಳೆ ಇಡುವ ಕಾರ್ಯಕ್ರಮ ಕೈಗೊಳ್ಳಲಾಗುವುದು. ತೆಂಗಿನ ಮರಕ್ಕೆ ಕಪ್ಪು ತಲೆ ಹುಳುಬಿದ್ದು ಬೆಳೆ ಹಾನಿ ಗೀಡಾಗುತ್ತಿರುವ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಈಗಾಗಲೇ ಸೂಕ್ತ ಕ್ರಮಕೈಗೊಳ್ಳಬೇಕಾಗಿದೆ.

ಶ್ರೀ ಎಂ. ವೀರಭದ್ರಪ್ಪ.—ಈಗಾಗಲೇ ತೋಟಗಾರಿಕೆ ಇಲಾಖೆಯಿಂದ.....

ಛೇರ್ಮನ್.—ಇದರ ಮೇಲೆ ಚರ್ಚೆ ಇಲ್ಲ.